SEPTEMBER O8, 2025

AKASHAVANI - DHARWAD

PRADESH SAMACHARA (KANNADA) 12 PM

<><><>

ಆಕಾಶವಾಣಿ

ಪ್ರದೇಶ ಸಮಾಚಾರ

<><><>

ಸ್ಥಳೀಯ ಸಂಸ್ಥೆ ಚುನಾವಣೆಗಳಲ್ಲಿ, ಸಾಂಪ್ರದಾಯಿಕ ಮತಪತ್ರಗಳನ್ನು ಬಳಸಲು ಅನುಕೂಲವಾಗುವಂತೆ, ಕಾನೂನು ತಿದ್ದುಪಡಿ ಮಾಡಲಾಗುತ್ತಿದ್ದು, ಸದ್ಯದಲ್ಲೇ ಸುಗ್ರೀವಾಜ್ಞೆ ಮೂಲಕ ಜಾರಿಗೊಳಿಸುವುದಾಗಿ, ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ, ತಿಳಿಸಿದ್ದಾರೆ. ಬೆಂಗಳೂರಿನಲ್ಲಿ ಮಾತನಾಡಿದ ಅವರು, ಮತಗಳ್ಳತನದ ದೂರುಗಳು ವ್ಯಾಪಕವಾಗಿ ಬಂದ ಹಿನ್ನೆಲೆ, ರಾಜ್ಯ ಸರ್ಕಾರ, ಸ್ಥಳೀಯ ಸಂಸ್ಥೆ ಚುನಾವಣೆಯಲ್ಲಿ, ಸಾಂಪ್ರದಾಯಿಕ ಮತಪತ್ರಗಳನ್ನು ಬಳಕೆ ಮಾಡಲು ಉದ್ದೇಶಿಸಿದೆ, ಎಂದರು.

<><><>

ಸ್ಥಳೀಯ ಸಂಸ್ಥೆಗಳ ಚುನಾವಣೆಯಲ್ಲಿ, ವಿದ್ಯುನ್ಮಾನ ಮತಯಂತ್ರದ ಬದಲಾಗಿ, ಸಾಂಪ್ರದಾಯಿಕ ಮತಪತ್ರಗಳನ್ನು ಬಳಸುವಂತೆ, ಚುನಾವಣಾ ಆಯೋಗಕ್ಕೆ, ರಾಜ್ಯ ಸರ್ಕಾರ ಶಿಫಾರಸು ಮಾಡಿದ ಹಿನ್ನೆಲೆ, ಬಿಜೆಪಿ ತೀವ್ರ ವಿರೋಧ ವ್ಯಕ್ತಪಡಿಸಿದೆ. 'ಒಂದು ದೇಶ, ಒಂದು ಚುನಾವಣೆ' ಕುರಿತು, ಬೆಂಗಳೂರಿನಲ್ಲಿ ಆಯೋಜಿಸಿದ್ದ  ಕಾರ್ಯಕ್ರಮದಲ್ಲಿ, ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ, ರಾಷ್ಟ್ರೀಯ ವಕ್ತಾರ ಗೌರವ ಭಾಟಿಯಾ ಸೇರಿದಂತೆ, ಹಲವು ಪ್ರಮುಖರು ಪಾಲ್ಗೊಂಡು, ರಾಜ್ಯ ಸರ್ಕಾರದ ನಡೆಯನ್ನು ಟೀಕಿಸಿದರು.

<><><>

'ರಾಷ್ಟ್ರಕ್ಕಾಗಿ ಮಧ್ಯಸ್ಥಿಕೆ' ಧ್ಯೇಯದೊಂದಿಗೆ, ಜುಲೈ 1 ರಿಂದ ಈ ತಿಂಗಳ 30ರ ವರೆಗೆ, 90 ದಿನಗಳ, ವಿಚಾರಣಾ ಹಂತದ ಪ್ರಕರಣಗಳನ್ನು, ಕಕ್ಷಿದಾರರು ರಾಜೀ ಸಂಧಾನದ ಮೂಲಕ, ಬಗೆಹರಿಸಿಕೊಳ್ಳಲು, ರಾಷ್ಟ್ರೀಯ ಹಾಗೂ ರಾಜ್ಯ ಕಾನೂನು ಸೇವಾ ಪ್ರಾಧಿಕಾರಗಳು, ಅವಕಾಶ ಕಲ್ಪಿಸಿವೆ. ಈ ತಿಂಗಳ 13 ರಂದು, 3 ನೇ ರಾಷ್ಟ್ರೀಯ ಲೋಕ್ ಅದಾಲತ್ ಆಯೋಜಿತವಾಗಿದೆ.

<><><>

ಗದಗ ಜಿಲ್ಲೆ, ಕಾನೂನು ಸೇವೆಗಳ ಪ್ರಾಧಿಕಾರದ, ಪ್ರಭಾರ ಅಧ್ಯಕ್ಷ ಸಿ.ಎಂ.ಗಂಗಾಧರ, ಜನತಾ ನ್ಯಾಯಾಲಯದ ಕುರಿತು ಮಾಹಿತಿ ನೀಡಿ, ರಾಜೀ ಸಂಧಾನಕ್ಕಾಗಿ, 2 ಸಾವಿರದ 678 ಪ್ರಕರಣಗಳನ್ನು ಗುರುತಿಸಲಾಗಿದೆ. ಒಟ್ಟು 20 ಸಾವಿರದ 505 ವಿವಿಧ ಪ್ರಕರಣಗಳು, ವಿಚಾರಣೆ ಹಂತದಲ್ಲಿವೆ ಎಂದರು.

<><><>

56ನೇ GST ಕೌನ್ಸಿಲ್ ಸಭೆಯಲ್ಲಿ, ಜಿ. ಎಸ್. ಟಿ ಸ್ಲಾಬ್ ಬದಲಾವಣೆ ತಂದಿರುವ, ಕೇಂದ್ರ ಸರ್ಕಾರದ ಈ ನಡೆಯನ್ನು ಸ್ವಾಗತಿಸಿರುವ, ವಿಜಯನಗರ ಜಿಲ್ಲೆಯ, ಹಿರಿಯ ವಿಮಾ ಪ್ರತಿನಿಧಿ ಕೆ. ಚಂದ್ರಶೇಖರ್, ವಿಮಾ ರಂಗದಲ್ಲಿ ಜಿಎಸ್‌ಟಿ ಮುಕ್ತತೆಯನ್ನು ಸ್ವಾಗತಿಸಿ, ಪ್ರದೇಶ ಸಮಾಚಾರಕ್ಕಾಗಿ ತಮ್ಮ ಅನಿಸಿಕೆ ಹಂಚಿಕೊಂಡಿದ್ದಾರೆ.

<><><>

ಧ್ವನಿ: ಕೆ. ಚಂದ್ರಶೇಖರ 39 ಸೆಕೆಂದುಗಳು

<><><>

ಹುಬ್ಬಳ್ಳಿ ಶ್ರೀ ಸಿದ್ಧಾರೂಢಸ್ವಾಮಿ ಮಠಕ್ಕೆ ಭೇಟಿ ನೀಡಿದ, ಆರ್ಟ್ ಆಫ್ ಲಿವಿಂಗ್ ಸಂಸ್ಥೆಯ, ಡಾಕ್ಟರ ರವಿಶಂಕರ ಗುರೂಜಿ ಅವರು, ಉಭಯ ಶ್ರೀಗಳ ಗುದ್ದುಗೆಗಳ ದರುಶನ ಪಡೆದರು. ಗುರೂಜಿ ಅವರನ್ನು ಶ್ರೀ ಮಠದ ವತಿಯಿಂದ ಸನ್ಮಾನಿಸಿ, ಗೌರವಿಸಲಾಯಿತು.

<><><>

ಮಂಡ್ಯ ಜಿಲ್ಲೆಯ ಮದ್ದೂರು ನಗರದಲ್ಲಿ, ಕಳೆದ ರಾತ್ರಿ ಗಣೇಶಮೂರ್ತಿ ವಿಸರ್ಜನೆ ವೇಳೆ ಸಂಭವಿಸಿದ ಕಲ್ಲು ತೂರಾಟ ಹಾಗೂ ಗುಂಪು ಘರ್ಷಣೆಗೆ ಸಂಬಂಧಪಟ್ಟಂತೆ, 21 ಮಂದಿಯನ್ನು ಬಂಧಿಸಲಾಗಿದೆ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಮಲ್ಲಿಕಾರ್ಜುನ ಬಾಲದಂಡಿ ತಿಳಿಸಿದ್ದಾರೆ. ಮದ್ದೂರು ನಗರಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದ ಅವರು, ಮುಂಜಾಗ್ರತಾ ಕ್ರಮವಾಗಿ ಇಂದು ಬೆಳಿಗ್ಗೆ 6ರಿಂದ ರಾತ್ರಿ 12ಗಂಟೆಯವರೆಗೆ ನಗರದಾದ್ಯಂತ ನಿಷೇಧಾಜ್ಞೆ ಹೊರಡಿಸಲಾಗಿದೆ ಎಂದು ಎಂದರು.

<><><>

ಪ್ರಧಾನಮಂತ್ರಿ ನರೇಂದ್ರ ಮೋದಿ ಅವರ, 75ನೇ ಜನ್ಮದಿನದ ಹಿನ್ನೆಲೆ, ಬಿಜೆಪಿ ಯುವ ಮೋರ್ಚಾ, ದೇಶಾದ್ಯಂತ 75 ಸ್ಥಳಗಳಲ್ಲಿ, ಇದೇ 21 ರಂದು 'ನಮೋ ಯುವ ರನ್' ಅಭಿಯಾನ ಆಯೋಜಿಸಿದೆ. ರಾಷ್ಟ್ರೀಯ ಬಿಜೆಪಿ ಯುವ ಮೋರ್ಚಾ ಅಧ್ಯಕ್ಷ, ತೇಜಸ್ವಿ ಸೂರ್ಯ ಹಾಗೂ ಕೇಂದ್ರ ಯುವಜನ ವ್ಯವಹಾರ ಹಾಗೂ ಕ್ರೀಡಾ ಖಾತೆ ಸಚಿವ ಮನ್ಸುಖ್ ಮಾಂಡವೀಯ, ಹೊಸ ದಿಲ್ಲಿಯ ಬಿ.ಜೆ.ಪಿ. ಕಚೇರಿಯಲ್ಲಿ, ವಿವಿಧ ಪರಿಕರ ಅನಾವರಣಗೊಳಿಸಿ, ನಶಾಮುಕ್ತ ಭಾರತ ಸಂಕಲ್ಪದ, ಸಾಕಾರ ಉದ್ದೇಶವಾಗಿದೆ ಎಂದರು.

<><><>

ಕೇಂದ್ರ ಸಾಹಿತ್ಯ ಅಕಾದೆಮಿ ಪ್ರಶಸ್ತಿ ಪುರಸ್ಕೃತ, ಪೂರ್ಣಚಂದ್ರ ತೇಜಸ್ವಿ ಅವರ ಜನ್ಮ ದಿನವಾದ ಇಂದು, ಗಣ್ಯರು ತೇಜಸ್ವಿ ಅವರ ಸಾಹಿತ್ಯ ಹಾಗೂ ಸಾಂಸ್ಕೃತಿಕ ಕೊಡುಗೆಗಳನ್ನು ಸ್ಮರಿಸಿ, ಗೌರವಪೂರ್ವಕ ನಮನಗಳನ್ನು ಸಲ್ಲಿಸಿದ್ದಾರೆ.

<><><>

ಬೀದರ್ ಜಿಲ್ಲೆಯ ಕಮಠಾಣ, ಬಗದಲ್, ಗೋಧಿ ಹಿಪ್ಪರಗಾ ಹಾಗೂ ಮುಡಬಿ ಸೇರಿದಂತೆ, ಮಳೆಯಿಂದ ಹಾನಿಗೊಳಗಾದ ವಿವಿಧ ಗ್ರಾಮಗಳಿಗೆ, ರಾಜ್ಯ ಪ್ರಕೃತಿ ವಿಕೋಪ ನಿರ್ವಹಣೆ ಕೋಶದ ಪ್ರಧಾನ ಕಾರ್ಯದರ್ಶಿ ಮುನೀಶ ಮೌದ್ಗಿಲ್ ಭೇಟಿ ನೀಡಿ, ಪರಿಶೀಲಿಸಿದರು. ಜಿಲ್ಲೆಯಾದ್ಯಂತ ಅತಿವೃಷ್ಟಿಯಿಂದಾದ ಹಾನಿಯ ಕುರಿತು ಅಧಿಕಾರಿಗಳಿಂದ ಮಾಹಿತಿ ಪಡೆದರು.

**<><><>**

ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.

<><><>

ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ ಮಧ್ಯಾಹ್ನ 1 ಗಂಟೆ 10 ನಿಮಿಷಕ್ಕೆ

<><><>